# ಸಂಸಾರದಲ್ಲಿ ಆಧ್ಯಾತ್ಮಿಕತೆ



* **ಭಕ್ತ:** ಮಹಾಶಯರೆ, ಸಂಸಾರಿ ಗಳಿಗೆ ಉಪಾಯವೇನು?

**ಶ್ರೀರಾಮಕೃಷ್ಣರು:** ಸಾಧುಸಂಗ ಮಾಡುತ್ತಿರಬೇಕು; ಆಧ್ಯಾತ್ಮಿಕ ವಿಷಯಗಳನ್ನು ಸತತ ಕೇಳುತ್ತಿರಬೇಕು. ಅವರು ಕಾಮಕಾಂಚನದ ಮತ್ತಿನಿಂದ ಉನ್ಮತ್ತರಾಗಿದ್ದಾರೆ. ಉನ್ಮತ್ತನಿಗೆ ಅಕ್ಕಿ ತೊಳೆದ ನೀರನ್ನು ಸ್ವಲ್ಪಸ್ವಲ್ಪವಾಗಿ ಕೊಡುತ್ತ ಕೊಡುತ್ತ ಬಂದ ಹಾಗೆ ಕ್ರಮಕ್ರಮೇಣ ಸರಿಯಾದ ಪ್ರಜ್ಞೆ ಉಂಟಾಗಿಬಿಡುತ್ತದೆ.

* ಸಂಸಾರಿಯು ಸದ್ಗುರುವಿನಿಂದ ಉಪದೇಶ ಪಡೆಯಬೇಕು. ಸದ್ಗುರುವಿಗೆ ಲಕ್ಷಣಗಳಿವೆ. ಯಾರು ಕಾಶಿಗೆ ಹೋಗಿ ಅದನ್ನು ಚೆನ್ನಾಗಿ ನೋಡಿ ಬಂದಿರುವರೊ, ಅವರಿಂದ ಕಾಶಿಯ ವಿಷಯವಾಗಿ ತಿಳಿದುಕೊಳ್ಳಬೇಕು. ಬರೀ ಪುಸ್ತಕಪಾಂಡಿತ್ಯ ಯಾವ ಪ್ರಯೋಜನಕ್ಕೂ ಬಾರದು. ಯಾರಿಗೆ ಈ ಸಂಸಾರ ಅನಿತ್ಯ ಎಂಬ ಬೋಧೆಯಾಗಿಲ್ಲವೊ, ಅಂಥ ಪಂಡಿತನ ಉಪದೇಶ ಸ್ವೀಕರಿಸುವುದು ಯುಕ್ತವಾದುದಲ್ಲ. ಪಂಡಿತನು ವಿವೇಕ-ವೈರಾಗ್ಯಸಂಪನ್ನನಾಗಿದ್ದರೆ ತಾನೇ ಆತ ಉಪದೇಶ ಕೊಡಲು ಅರ್ಹನಾಗುತ್ತಾನೆ?

* ಪ್ರಾಪಂಚಿಕರು ಕಾಮಕಾಂಚನದಿಂದ ಮತ್ತರಾಗಿದ್ದಾರೆ; ಆಧ್ಯಾತ್ಮಿಕ ಭಾವನೆಗಳು ಅವರ ತಲೆಗೆ ಹೋಗವು. ಅದಕ್ಕಾಗಿಯೆ ನನಗೆ ಯುವಕರನ್ನು ಕಂಡರೆ ಬಲು ಪ್ರೀತಿ. ಅವರ ಅಂತರ್ಯವನ್ನು ಕಾಮಕಾಂಚನ ಇನ್ನೂ ಹೊಕ್ಕಿರುವುದಿಲ್ಲ. ಅವರು ಒಳ್ಳೆಯ ಪಾತ್ರೆ; ಭಗವಂತನ ಕೆಲಸಕಾರ್ಯಗಳಿಗೆ ಒದಗಬಹುದು. ಆದರೆ ಪ್ರಾಪಂಚಿಕರ ಅಂತರ್ಯದಲ್ಲಿರುವ ಕೆಲಸಕ್ಕೆ ಬಾರದ ವಸ್ತುಗಳನ್ನು ಬೇರ್ಪಡಿಸುತ್ತಾ ಹೋಯಿತು ಅಂದರೆ ಕೊನೆಗೆ ಅವರ ಅಂತರ್ಯವೇ ಖಾಲಿಯಾಗಿಬಿಡುತ್ತದೆ. ಕೊನೆಗೆ ಅವರನ್ನು ಒಂದು ವಿಧದ ಮೂಳೆಪ್ರಾಧಾನ್ಯವಾಗಿರುವ ಮೀನಿಗೆ ಹೋಲಿಸಬಹುದು. ಅದರಲ್ಲಿರುವ ಮಾಂಸದ ಭಾಗ ಅಷ್ಟು ಅಲ್ಪ, ಮಾಂಸ ಇಲ್ಲ ಅಂತಲೇ ಬೇಕಾದರೆ ಹೇಳಬಹುದು.

* ಯುವಕರಿಗೂ ಸಂಸಾರಿಗಳಿಗೂ ಇರುವ ಅಂತರವನ್ನು ನೀನೇ ನೋಡು. ಈ ಪಂಡಿತ ಹಗಲೂ ಇರುಳೂ ದುಡ್ಡು ಅನ್ನುತ್ತಲೇ ಇದ್ದಾನೆ. ಹೊಟ್ಟೆಗಾಗಿ ಕಲ್ಕತ್ತಕ್ಕೆ ಬಂದಿದ್ದಾನೆ; ಇಲ್ಲದೆ ಇದ್ದರೆ ಈತನ ಮನೆಯವರು ಹೊಟ್ಟೆ ತಾಳ ಹಾಕಬೇಕಾಗುತ್ತದೆ. ಅದಕ್ಕಾಗಿ ಈತ ಹಾಗೂ ಹೀಗೂ ಮಾಡಿ ಸಂಪಾದಿಸಬೇಕಾಗುತ್ತದೆ. ಮನಸ್ಸನ್ನು ಏಕಾಗ್ರಮಾಡಿ ಭಗವಚ್ಚಿಂತನೆ ಮಾಡುವುದಕ್ಕೆ ಈತನಿಗೆ ಸಮಯವೆಲ್ಲಿ? ಆದರೆ ಯುವಕರ ಹೃದಯವನ್ನು ಕಾಮಕಾಂಚನ ಇನ್ನೂ ಸ್ಪರ್ಶಮಾಡಿಲ್ಲ; ಇಚ್ಛೆಪಟ್ಟರೆ ಅವರು ಭಗವಂತನ ಕಡೆ ಮನಸ್ಸನ್ನು ತಿರುಗಿಸಬಲ್ಲರು.

* ಕಾಮಕಾಂಚನದಲ್ಲಿ ಆಸಕ್ತವಾಗಿರುವ 'ಅಹಂ' ಮಾತ್ರ ಕೆಟ್ಟ 'ಅಹಂ'. ನಾನು ಭಗವಂತನ ದಾಸ ಎಂಬ 'ಅಹಂ' ಕೆಟ್ಟದೇನಲ್ಲ. ಬಾಲಕನ 'ಅಹಂ' ಕೂಡ ಕೆಟ್ಟದಲ್ಲ. ಆತ ಯಾವ ಗುಣಗಳಿಗೂ ವಶನಲ್ಲ. ಮಕ್ಕಳು ಈ ನಿಮಿಷ ಪರಸ್ಪರ ಜಗಳ ಕಾಯುತ್ತವೆ; ಮರುನಿಮಿಷ ಒಂದಾಗುತ್ತವೆ. ಈ ಕ್ಷಣದಲ್ಲಿ ಬಹಳ ಕಷ್ಟಪಟ್ಟು ಆಟದ ಮನೆ ಕಟ್ಟುತ್ತವೆ; ಮರುಕ್ಷಣ ತಾವೇ ಅದನ್ನು ತುಳಿದುಹಾಕಿಬಿಡುತ್ತವೆ. ದಾಸನ 'ಅಹಂ' ಬಾಲಕನ 'ಅಹಂ' ಇವುಗಳಿಂದ ಯಾವ ಕೆಡುಕೂ ಸಂಭವಿಸದು. ಯಾವ ರೀತಿಯಾಗಿ ಕಲ್ಲುಸಕ್ಕರೆ ಸಿಹಿ ಪದಾರ್ಥಗಳ ಗುಂಪಿಗೆ ಸೇರಿಲ್ಲವೊ, ಅದೇ ರೀತಿಯಾಗಿ ಈ ವಿಧದ 'ಅಹಂ', 'ಅಹಂ' ಗುಂಪಿಗೆ ಸೇರಿಲ್ಲ. ಉಳಿದ ಸಿಹಿಪದಾರ್ಥಗಳು ಅನಾರೋಗ್ಯವನ್ನು ತರುತ್ತವೆ; ಆದರೆ ಕಲ್ಲುಸಕ್ಕರೆ ಆಮ್ಲಹಾರಿ. ಅಥವಾ ಇದು ಓಂಕಾರದ ಹಾಗೆ. ಅದು ಶಬ್ದಗಳ ಗುಂಪಿಗೆ ಸೇರಿಲ್ಲ.

* ಅಪ್ರಾಪ್ತ ವಯಸ್ಕನಿಗೆ ಮಾತ್ರ ರಕ್ಷಕನನ್ನು ನಿಯಮಿಸುತ್ತಾರೆ. ಹುಡುಗ ತಾನೇ ತನ್ನ ಸ್ವತ್ತನ್ನು ಕಾಪಾಡಿಕೊಳ್ಳಲಾರ; ಆದ್ದರಿಂದ ದೊರೆ ಆತನ ಸಂರಕ್ಷಣೆಯ ಭಾರವನ್ನು ಹೊತ್ತುಕೊಳ್ಳುತ್ತಾನೆ. ನಾವು ನಮ್ಮ ಅಹಂಕಾರವನ್ನು ತ್ಯಜಿಸದ ಹೊರತು ಭಗವಂತ ನಮ್ಮಗಳ ಭಾರವನ್ನು ಹೊತ್ತುಕೊಳ್ಳಲೊಲ್ಲ.

* ಭಗವಂತನೇ ಪ್ರತಿಯೊಂದನ್ನೂ ಮಾಡುತ್ತಿದ್ದಾನೆ. ನಾವು ಆತನ ಕೈಯ ಯಂತ್ರಗಳು ಮಾತ್ರ. ಕಾಳೀದೇವಾಲಯದ ಎದುರಿಗೆ ಕೆಲವು ಸಿಖ್ ಮತದವರು ನನಗೆ ಹೇಳಿದರು, 'ಭಗವಂತ ದಯಾಮಯ' ಅಂತ. ನಾನು ಕೇಳಿದೆ, 'ಯಾರಿಗೆ ಆತ ದಯಾಮಯ?' ಅಂತ. ಅವರು ಹೇಳಿದರು, 'ಏಕೆ ಪೂಜ್ಯರೆ, ನಮ್ಮೆಲ್ಲರಿಗೂ' ಅಂತ. ನಾನು ಹೇಳಿದೆ, 'ನಾವೆಲ್ಲರೂ ಆತನ ಮಕ್ಕಳು. ಮಕ್ಕಳ ಮೇಲೆ ದಯೆ ತೋರಿಸುವುದು ಎಂದರೇನು? ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದು ತಂದೆಯ ಕರ್ತವ್ಯ; ಆತ ನೋಡಿಕೊಳ್ಳದೆ, ಪಕ್ಕದ ಕೇರಿಯವರು ಬಂದು ನೋಡಿಕೊಳ್ಳುತ್ತಾರೇನು? ಒಳ್ಳೆಯದು, ಯಾರು ಭಗವಂತ ದಯಾಮಯ ಅಂತ ಹೇಳುತ್ತಾರೊ ಅವರ ತಲೆಗೆ, ತಾವು ಭಗವಂತನ ಮಕ್ಕಳೇ ವಿನಾ ಬೇರೆ ಯಾರ ಮಕ್ಕಳೂ ಅಲ್ಲ ಎಂಬ ಭಾವನೆ ಬರುತ್ತಿಲ್ಲವೇನು?'

**'ಶ್ರೀರಾಮಕೃಷ್ಣ ವಚನವೇದ'**ದಿಂದ